# ನನ್ನಳವಿನ ಅಜ್ಜ

ನನಗೆ ಇಪ್ಪತ್ತರ ಮೇಲೆ ಮೂರು ನಡೆವ ಹೊತ್ತು.
ಇಂಥ ಶೈಶವಾವಸ್ಥೆಯಲ್ಲಿ ಕಂಡ ಒಬ್ಬರು ಅಜ್ಜ –ಪುತ್ತೂರಜ್ಜ.
ಇವರು 'ಅಜ್ಜ' ಯಾಕೆ ನನಗೆ ಗೊತ್ತಿರಲಿಲ್ಲ.
ನಾನು ಮೊದಲ ಬಾರಿ ಅಪ್ಪಯ್ಯನೊಂದಿಗೆ ಅವರನ್ನು ಕಂಡೆ.
ಅಪ್ಪಯ್ಯ- ಅಜ್ಜ ಎದುರು ಬದುರು ಬದುರು ಕುಳಿತಿದ್ದರು.
ನಾವು ಪಕ್ಕಕ್ಕೆ ಮೂಕ ಪ್ರೇಕ್ಷಕರು.
ಬಹಳ ಹೊತ್ತು ಮೌನ, ಘನ ಮೌನ.
ಎಷ್ಟೋ ಸಮಯದ ಬಳಿಕ ಸ್ಫೋಟ...
ಅಪ್ಪಯ್ಯ ಹೇಲಿದರು, 'ತುಂಬಿದ ಕೊಡ.."
ಅಜ್ಜ ಹೇಳಿದರು,   " ತುಂಬಿದ ಕೊಡ ನೀವು.. ನಾವು ಖಾಲಿ ಕೊಡ'

ಅಪ್ಪಯ್ಯ " ಊಂ ಹೂಂ ನೀವೇ ತುಂಬಿದ ಕೊಡ"
ಅಜ್ಜ." ನಾವು ಖಾಲಿ. ಖಾಲಿ... ನೀವು ತುಂಬಿದ ಕೊಡ.. ಪಾತ್ರೆ ಹುಡುಕುತ್ತಿದ್ದೀರಿ
ಒಳ್ಳೆಯ ಪಾತ್ರೆ ಸಿಕ್ಕ ದಿನ ಕೊಟ್ಟು ಹೋಗುವವರಿದ್ದೀರಿ"

ನನಗೆ ಆಗ ಆಧ್ಯಾತ್ಮಿಕ ಗೊತ್ತಿಲ್ಲ. ಬರೀ ಒಂದು ಮಿಕ.(ಈಗಲೂ ಮಿಕವೇ,ಅಧ್ಯಾತ್ಮ ಸೇರಿಕೊಡಿದೆ ಅಷ್ಟೆ)
ಕಣ್ಣು ಪಿಳುಕಿಸಿದೆ ಅಷ್ಟೆ.
ಮಾತು ಅರ್ಥವಾಗಲಿಲ್ಲ. ಏನೋ ವಿಶೇಷ ಅನಿಸಿತು.
ಅಲ್ಲಿಗೆ ಅವರ ಮಾತೇ ಮುಗಿದಿತ್ತು.

ಇದಾದ ಬಳಿಕ ವರ್ಷಕ್ಕೆ ಒಂದೆರಡು ಸಾರಿ ಅಜ್ಜನನ್ನು ಕಾಣುತ್ತಿದ್ದೆವು.
ಪುತ್ತೂರಿನ ಲಕ್ಷ್ಮೀಶ ತೋಳ್ಪಾಡಿಯವರ ಮನೆಯಲ್ಲಿ ತುಂಬಾ ಸಲೀಸಾಗಿ ನಮ್ಮೊಂದಿಗಿರುತ್ತಿದ್ದರು.
ಹಿಮಾಲಯದ ೮ ತಿಂಗಳ ಏಕಾಂತವನ್ನು ಮುಗಿಸಿ ೪ ತಿಂಗಳು ಈ ಕಡೆಗೆ ಬರುತ್ತಿದ್ದ ಕಾಲವದು.
ಮಾತಿಗಿಂತ ಆಗೆಲ್ಲಾ ಬರೇ ಮೌನ.
ಅಜ್ಜ ಅಂದಿದ್ದನ್ನು ಕೇಳಿದ್ದಷ್ಟೇ ಆಗಿನ ನೆನಪು."ಈದೇಹ ನಾವಲ್ಲ. ಎಲ್ಲರೊಳಗೆ ಇರುವವರು ನಾವು."
ಇವು ಅವರ ಆಗಿನ ಅರ್ಥವಾಗದಮಾತು.
ಒಮ್ಮೆ ಅವರು 'ಸತ್ಯಕಾಮರೆ ನೀಮ್ಮ ಬಳಿ ವೀಣಾ ಬಂದಳಲ್ಲ
ಹಾಗೆ ನಮ್ಮ ಬಳಿ ಒಂದು ಬರಲಿಕ್ಕುಂಟು' ಅನ್ನುತ್ತಿದ್ದರು.
ಅದು ಸುಮಾರಾಗಿ ೧೯೭೪ರ ಮಾತು.
ಒಂದೆರಡು ವರ್ಷದೊಳಗೆ ಶಿವಮೊಗ್ಗದ ಶಾಂತಕ್ಕ ಬಂದರು.
ನಮ್ಮ ವಿರಕ್ತ ಕುಟುಂಬ ಹಿರಿದಾಯಿತು.
ಭೇಟಿ ಪ್ರತೀ ವರುಷವೂ ಇತ್ತು.

ಅಧ್ಯಾತ್ಮದ ಮಾತೇ ಆಡದ ಅಪ್ಪಯ್ಯ.
ಅದರ ಹೊರತು ಬೇರೆ ಮಾತಾಡದ ಅಜ್ಜ.

ದೇಹ ದಾಂಡಿಗನಂತೆ ವ್ಯವಹಾರ ನಿರತ ಅಪ್ಪಯ್ಯ.
ನಿರಂತರ ಯೋಗನಿದ್ರೆಯ ಅಜ್ಜ
ಎರಡನ್ನೂ ನೋಡಿ ಕೆಲವೊಮ್ಮೆ ಅಪ್ಪಯ್ಯನೊಂದಿಗೆ ಪ್ರಶ್ನೆಯಾಗಿದ್ದೇನೆ.
ಅಪ್ಪಯ್ಯ " ಮಗಳೇ, ಅಲ್ಲಿ ನಡೆದು ಇಲ್ಲಿಯೂ ನಡೆಯುವುದು ಒಂದು ದಾರಿ.
ಅಲ್ಲಿ ನಡೆದ ಬಳಿಕ ಇಲ್ಲಿಗೆ ಮರಳಲಾಗದ್ದು ಇನ್ನೊಂದು ದಾರಿ.ಎರಡೂ ದಾರಿಗಳೆ. ಸಮ ಚಿತ್ತ ಬೇಕು..."

ನನಗೆ ಅರ್ಥವಾಗುತ್ತಿರಲಿಲ್ಲ.
ನನಗೆ ಮಾತಿಗಿಂತ ಸಾನ್ನಿಧ್ಯ ಉತ್ತಮ ಅನ್ನಿಸುತ್ತಿತ್ತು.
ಇಬ್ಬರ ಸಾನ್ನಿಧ್ಯವನ್ನು ಅನುಭವಿಸುತ್ತಿದ್ದೆ.

ಅಜ್ಜ ನನ್ನೊಂದಿಗೆ ಹೆಚ್ಚು ಮಾತಾದಿದ್ದು ಅಪ್ಪಯ್ಯ ಸತ್ತ ಮೇಲೆ.
ಅದಾಗಲೆ ಅಜ್ಜನ ಸುತ್ತ ಒಂದು ವ್ಯವಸ್ಥೆ ನಿರ್ಮಾಣವಾಗಿತ್ತು.
ಅಜ್ಜನ ಭೇಟಿಗೆ ಕಾಲ ದೇಶಗಳ 'ಬಂಧನ'ವಿತ್ತು.
ಅದರೊಳಗೆ ನಾನೂ ಹೋಗಿ ಅವರನ್ನು ಕಂಡಿದ್ದೆ.
ಅಲ್ಲೆಲ್ಲಾ ವಿರಕ್ತ ಕುಟುಂಬದ ಸಲಿಗೆ ಇರುತ್ತಿರಲಿಲ್ಲ.
ಆದರೆ ಅಜ್ಜ ಹೃದಯಮುಟ್ಟಿ ಮಾತನಾಡುತ್ತಿದ್ದರು.
ಮಾತು ಜ್ಯೋತಿರ್ಲಿಂಗ.
ನುಡಿದು ನಡೆಯದವನನ್ನು ಅವನು ಒಲಿಯಲಾರ.
ಈ ದೃಷ್ಟಿಯಲ್ಲಿ ಅಜ್ಜನ ಮಾತು ತುಂಬ ಕಂಡರಿಸಿದಂತೆ ಇತ್ತು.
ನಾನು ತುಂಬ ವಿಸ್ಮಯದಿಂದ ಆವರ ಬಳಿ ಕಾಲಕಳೆಯುತ್ತಿದ್ದೆ.
ಅವರ ಒಂದೆರಡು ನುಡಿ ನನ್ನೊಳಗೆ ಇಳಿದಿದೆ.
ಒಮ್ಮೆ ಅವರು ಕೇಳಿದರು,
'ಸತ್ಯಕಾಮರನ್ನು ತುಂಬಿದಕೊಡ ಅಂದಿದ್ದೆವು ನೆನಪುಂಟ ವೀಣಾ?
'ಅಜ್ಜಾ ನೆನಪುಂಟು. ಆದರೆ ಖಾಲಿ ಕೊಡ ಯಾಕೆ?
ತುಂಬ ಬಾರದು ಎಂಬ ಹಠವಾ?
ತುಂಬಲಾಗದಂತೆ ಅದರ ಬುಡ ಒಡೆದಿದೆಯಾ?
ಅಜ್ಜ ನಕ್ಕರು.
ಅಲ್ಲಪ್ಪಾ, ಅದು ಹಾಗಲ್ಲ.
ಇಕೊಳ್ಳಿ ಈಗಷ್ಟೆ ಸಿಮೆಂಟು ಮಾಡಿದ ಹಸಿಗೋಡೆ ನೋಡಿ
ಸೆಗಣಿವರೆಸಿ ಅಂಟಿಕೊಳ್ಳುತ್ತದೆ. ಅಥವಾ ಇನೇನನ್ನೋ ಹಚ್ಚಿ.
ಆದ್ರೆ ಏಗ ಏನೋ ಬರ್ತದಂತಲ್ಲ. ತೊಳೆದರೆ ಕೊಳೆಹೋಗುವಂತಹ ಪೈಂಟ್
ಅದನ್ನು ಹಚ್ಚಿದ ಗೋಡೆಗೆ ಬೇಕಾದದ್ದನ್ನು ಹಚ್ಚಿ ಮತ್ತೆ ತೊಳೆದರೆ ಹೋಗುತ್ತದೆ.
ಹಾಗಪ್ಪ. ಏನನ್ನೇ ವರೆಸಿ ಈ ಕೊಡದೊಳಗೆ ಅಂಟಿಕೊಳ್ಳುವುದಿಲ್ಲ.
ಯಾಕೆ ಗೊತ್ತಾ ಈ ಕೊಡದಿಂದ ನಮಗೆ ಏನೂ ಆಗಬೇಕಿಲ್ಲ.
ಆನಂದ ಕೂಡಾ ಇಲ್ಲ. ಬರೀ ಖಾಲಿ..
ಆನಂದ ಅದರೂ ಅದರಿಂದ ಬೇರೆಯವರಿಗೆ..
ಅಂದವರೇ ಘಟ ಬಾರಿಸುವಂತೆ ಬೆರಳಸನ್ನೆ ತೋರಿದರು.

ಆನಂದದ ಅರಿವೂ ಈ ದೇಹಕ್ಕೆ ಇಲ್ಲ ಎಂಬುದು ನನಗೆ ಆಗ ಖುಷಿಕೊಟ್ಟ ಸಂಗತಿ.

ಅಲ್ಲಿ ಯಾರೋ ಪ್ರಶ್ನೆಗೆ ತೊಡಗಿದರು.
'ಮನಸ್ಸು ತುಂಬಾ ಓಡಾಡುತ್ತೆ. ನಿಲ್ಲಿಸೋದು ಹೇಗೆ ಅಜ್ಜಾ?'
"ಓಹ್ ನಿಲ್ಲಿಸಲಿಕ್ಕಾಗುವುದಿಲ್ಲಪ್ಪಾ.
ಇಕೊಳ್ಳಿ ಇದು ಫ್ಯಾನ್ ತಿರುಗುತ್ತಾ ಉಂಟಲ್ಲಾ?
ನಿಲ್ಲಿಸಬೇಕು ಅಂತ ಅದರ ಗರಿಗೆ ಕೈ ಹಾಕುವುದಾ?
ಬೆರಳು ಕಟ್ ಆಗಲಿಕ್ಕಿಲ್ವಾ?
ಏನು ಮಾಡೋದು ಮತ್ತೆ?
ಸ್ವಿಚ್ ಎಲ್ಲುಂಟು ನೋಡಿ ಅದನ್ನು ಆಫ್ ಮಾಡಬೇಕು ಅಲ್ವಾ? ಹಾಗೆ ಸ್ವಿಚ್ ಹುಡುಕಿ.
ಸ್ವಿಚ್ ಸಿಕ್ಕಿಬಿಟ್ಟರೆ ಮತ್ತೆ ಮುಗೀತು. ಆಮೇಲೆ ಓಡಲಿ ನೋಡ್ವಾ?
ಅಜ್ಜನ ಮುಖದಲ್ಲಿ ನಗು, ಅದನ್ನು ನೋಡದ ಕಣ್ಣು.
ಅಜ್ಜನ ಅನುಭವ ತುಂಬಾ ಪಾರಮಾರ್ಥಿಕ
ಆದ್ರೆ ಅವರ ಉದಾಹರಣೆ ತೀರಾ ತಾರ್ಕಿಕ.
ಮಗುವಿಗೆ ಹಾಲೂಡಿಸುವ ಅಮ್ಮನಂತೆ.

ಮತ್ತಾರೋ ಕೇಳಿದರು.
"ಮನಸ್ಸು ಒಂದೇ ಇಲ್ವಲ್ಲಾ. ಎರಡುಂಟಲ್ವಾ? ಒಳಗೊಂದು. ಹೊರಗೊಂದು"
ಇಶ್ಶಪ್ಪ... ಹಾಗಲ್ಲಪ್ಪಾ...
ಒಂದೇ ಮನಸ್ಸು ಎರಡು ಮುಖ ಮಾತ್ರ.
ನೋಡಿ, ನೀವೇ ಸರಿಯಾಗಿ ನೋಡಿ.
ಇಕೊಳ್ಳಿ ನಾವು ಈ ಅಂಗಿ ಹಾಕೊಂಡಿದ್ದೇವೆ.
ಇದಕ್ಕೆ ಬಟನು ಉಂಟಲ್ವಾ?
ಈಗ ಈ ಅಂಗಿಯನ್ನು ಅಡಿಮೇಲು ಮಾಡಿ ಹಾಕ್ಕೊಳ್ವಾ?
ಆಮೇಲೆ ಬಟನ್ ಹಾಕಲಿಕ್ಕೆ ಆಗ್ತದಾ?
ಅಕೊಳ್ಳಿ, ಹಾಗೆ ಒಮ್ಮೆ ಮನಸ್ಸನ್ನು ಅಡಿಮೇಲು ಮಾಡಿಬಿಡಿ.
ಮತ್ತೆ ಬಟನ್ ಇಲ್ಲ. ಬಯಲೋ ಬಯಲು, ಆ ಮುಖ ಈ ಮುಖ
ಎಲ್ಲ ಅಡಿಮೇಲು
ಅಜ್ಜನ ಮಾತು ಎಷ್ಟು ಚಂದ ಅನಿಸಿತು.
ಎಷ್ಟು ಕಠೋರ ಸಂಗತಿ ಅಜ್ಜನ ಕೈಯಲ್ಲಿ ಎಷ್ಟು ಮೃದು.

ಒಮ್ಮೆ ಅಜ್ಜ ತಮ್ಮ ಸಮಾಧಿ ಕಟ್ಟುತ್ತಿದ್ದಾರೆ ತಿಳಿಯಿತು.
ಅದೊಂದು ಸಂಕ್ರಮಣ ದಿನ.
ಅಜ್ಜ ಅದನ್ನು ಪ್ರವೇಶಿಸುತ್ತಾರೆ ಎಂಬ ಗುಸುಗುಸು ಇತ್ತು.
ನಾನು ಕುತೂಹಲದಿಂದಲೇ ಅವರ ಬಳಿ ಹೋಗಿದ್ದೆ.
'ಎಲ್ಲಾ ಬಿಟ್ಟವರಿಗೆ ಸಮಾಧಿ ಯಾಕೆ?' ಎಂಬ ಪ್ರಶ್ನೆ ನನ್ನಲ್ಲಿತ್ತು.
ನಾನು ಪ್ರಶ್ನಿಸುವುದು ಕಡಿಮೆ.

ಪ್ರಶ್ನೆ ಹುಟ್ಟಿದ್ದು ನನ್ನಲ್ಲೇ ಆದ್ದರಿಂದ ಉತ್ತರ ನನ್ನಲ್ಲೇ ಇದೆ ಎಂಬ ಕಾಯ್ಕೆ.
ಅಜ್ಜ ಎಲ್ಲರೂ ಹೋದ ಬಳಿಕ ನನ್ನನ್ನು ಸಮೀಪಕ್ಕೆ ಕರೆದರು.
"ಸಮಾಧಿ ಯಾಕೆ ಅಂತ ಪ್ರಶ್ನೆ ಅಲ್ವಾ?
ನಾವು ಕಟ್ಲಿಲ್ಲ ಅಂತ ಇಟ್ಕೊಳ್ಳಿ.
ನಾವು ಹೋದಮೇಲೆ ಇವರೆಲ್ಲಾ ಸೇರಿ ಕಟ್ಟದೆ ಇರ್ತಾರಾ?
ಇವರು ಕಟ್ಟಿದರೆ ಮತ್ತೆ ಇವರ ಋಣ ತೀರಿಸ್ಲಿಕ್ಕೆ ನಾವು ಬರಬೇಡ್ವಾ?
ಅದಕ್ಕೆ ನಮ್ಮ ಸಮಾಧಿ ನಾವೇ ಕಟ್ಕೋದು.
ವ್ಯಪೋಹ್ಯ ಶೀರ್ಷ ಕಪಾಲೇ ನೆನಪಾಯಿತು.
ಇದ್ದಾಗಲೇ ಸಾಯುವ ಸಂಗತಿ ಸೆಳೆಯಿತು.
ನಮಿಸಿದೆ .. ನಡೆದೆ.

ಪುತ್ತೂರಜ್ಜ ಹೀಗೆ ನನ್ನ ಮುಂದೆ ಅಲ್ಲಲ್ಲಿ ತೆರವಾದವರು.
ಕೆಲವರಿಗೆ ಅವರು ಸೂರ್ಯನಷ್ಟು ಮಿತ್ರ.
ಮತ್ತೆ ಕೆಲವರಿಗೆ ನಿತ್ಯವೂ ಸ್ನಾನದ ನದಿ.
ಇನ್ನು ಹಲವರಿಗೆ ಫಲವಿತ್ತು ಬೆಳೆವ ಮಣ್ಣು.
ನನಗೆ ಅಪರೂಪಕ್ಕೊಮ್ಮೆ ಬಾನಕಡೆ ಮುಖಮಾಡಿದಾಗ ಕಂಡ ನಕ್ಷತ್ರ.
ಹಾಗಾಗಿ ನಾನು ಅವರ ಕುರಿತು ಏನನ್ನೂ ಹೇಳಲಾರೆ. ಅವರ ಮೇಲಿನ ಮಾತುಗಳೇ ಅವರನ್ನು ತೋರುತ್ತವೆ.

ಅಜ್ಜ ಒಳಗೆ ಹೇಗಿದೆಯೋ ಹಾಗೆಯೇ ತೋರಿದವರು.
ಅಪ್ಪಯ್ಯ ಒಳಗೆ ತೋರದೆ ಹೊರಗೆ ಕಂಡವರು.
ಒಮ್ಮೆ ಅಜ್ಜ ಅಪ್ಪಯ್ಯನ ತೋಟ ಕಲ್ಲಹಳ್ಳಿಗೆ ಬಂದಿದ್ದರು.
ಕಾಳು ಹರಡಿದ್ದ ಅಂಗಳ ಅದು.
ಅಲ್ಲೇ ಕುಳಿತು ಹೆಸರುಕಾಳನ್ನು ಅಂಗೈಯಲ್ಲಿಟ್ಟು ಕರೆದರು.
'ಎನಜ್ಜಾ?' ಅಂತ ಅವರ ಬಳಿ ಕುಳಿತೆ.
'ಈ ಕಾಳು ನೋಡಿದಿರಾ?
ಹೌದು ಅಜ್ಜಾ ಹೆಸರು ಕಾಳು
ಇನ್ನೊಂದು ಕೈಯಲ್ಲಿ ಸಿಪ್ಪೆಯಿಲ್ಲದ ಹೆಸರುಕಾಳು ಹಿಡಿದು 'ಇದು?' ಎಂದರು.
ಅದು ಸಿಪ್ಪೆಯಿಲ್ಲದ ಹೆಸರುಕಾಳುಅಜ್ಜಾ' ಅಂದೆ.
ಅಜ್ಜ, " ನಾವು ಎರಡನ್ನು ಒಂದೊಂದು ಕಡೆ ಮಣ್ಣಲ್ಲಿ ಮುಚ್ತೇವೆ. ನೀರು ಹಾಕಿ ನೋಡುವ, ಮೊಳಕೆ ಬಂದೀತಾ? ಕೇಳಿದರು.
"ಅಜ್ಜ ಸಿಪ್ಪೆ ಇದ್ದ ಕಾಳು ಮೊಳೀತದೆ. ಇನ್ನೊಂದು ಮೊಳೆಯೋದಿಲ್ಲ' ಅಂದೆ.
ಅಜ್ಜ ಛಕ್ಕಂತ ಚಿಟಿಕೆ ಹಾರಿಸಿ
"ಅಕೊಳ್ಳಿ ಎಷ್ಟು ಸುಲಭ ನೋಡಿ.
ಆವರಣ ಕಳಚಿಕೊಳ್ಳಿ. ಮತ್ತೆ ಹುಟ್ಟು ಸಾವಿಲ್ಲ" ಅಂದು ಬಿಟ್ಟರು.
ತುಂಬಾ ಇಷ್ಟವಾದ ಮಾತು ಅದು.
ಆದರೆ ಅಷ್ಟು ಸುಲಭವಾ? ಅಜ್ಜ ಹೇಳಿದಷ್ಟು.

ಒಂದು ಕಡೆ ದೇಹದಂಡನೆ ಮಾಡಿ ಕಾಲೊರೆಸಿ ನಡೇದ ಹೆತ್ತಜ್ಜ.
ಮತ್ತೊಂದೆಡೆ ಈ ದೇಹ ನಾವಲ್ಲ ಎಂಬ ಪುತ್ತೂರಜ್ಜ
ಆವರಣವನ್ನು ಚೆನ್ನಾಗಿ ಬೆಳೆಸಿ ಕೊಬ್ಬಿದಂತೆ ಕಂಡು ಮೊಳಕೆಯೊಡೆಯದಂತೆ ನೋಡಿಕೊಂಡ ಅಪ್ಪಯ್ಯ.
ಇಲ್ಲೇ ಈ ದೇಹದೊಳಗೆ ಇದ್ದಾಗಲೇ 'ಠಪ್ಪ'ಂತೇ ತಲೆಹೋಳುವ ದಾರಿ.
ಇದರೊಳಗೆ ಇರುವವರು ಬೇರೆ, ಇದ್ದವರು ಬೇರೆ ಎಂಬ ಪುತ್ತೂರಜ್ಜ.
ಎಲ್ಲ ತೂಗಿ ನೋಡಿದರೆ ನದುವೆ ಎಲ್ಲೋ ಒಂದು ಬೆಳಕು ಕಾನಿಸುತ್ತದೆ.
ಅಲ್ಲಿಗೆ ಹೊರಡುವ ಸನ್ನಾಹದಲ್ಲಿ  ಎಲ್ಲ ಅಜ್ಜಂದಿರಿಗೂ ನಮನ.
ವೀಣಾ ಬನ್ನಂಜೆ